Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**
ವಿಶೇಷ ಸಂಚಿಕೆ

भाग–IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं–1 | नई दिल्ली सोमवार, डिसेम्बर 15, 1986 | मार्गशिर 24, 1908 (शक) | खन्ड–5 |
| No. 1 | New Delhi Monday, December 15, 1986 | Margashira 24, 1908 (Saka) | Vol. 5 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಡಿಸೆಂಬರ್ ೧೫, ೧೯೮೬ | ಮಾರ್ಗಶಿರ ೨೪, ೧೯೦೮ (ಶಕ) | ಸಂಪುಟ ೫ |

## MINISTRY OF LAW AND JUSTICE
(Legislative Department)

New Delhi, October 9, 1986/Ashwayuja 17, 1908 (Saka)

The translations in Kannada of the following namely— (1) The Societies Registration Act, 1860 (2) The Local Authorities Loans Act, 1914 (3) The Commercial Documents Evidence Act, 1939 (4) The Industrial Disputes (Banking and Insurance Companies) Act, 1949 (5) The Commissions of Inquiry Act, 1952 (6) The Employment Exchanges (Compulsory Notification of Vacancies) Act, 1959–are hereby published under the authority of the President and shall be deemed to be the authorised translations thereof in Kannada under clause (a) of Section 2 of the authorised Translations (Central Laws) Act, 1973 (50 of 1973).

ಕೆಳಕಂಡ ಅಧಿನಿಯಮಗಳು ಎಂದರೆ (೧) ಸೊಸೈಟಿ ನೋಂದಣಿ ಅಧಿನಿಯಮ, ೧೮೬೦ (೨) ಸ್ಥಳೀಯ ಪ್ರಾಧಿಕಾರಗಳ ಸಾಲಗಳ ಅಧಿನಿಯಮ, ೧೯೧೪ (೩) ವಾಣಿಜ್ಯ ದಸ್ತಾವೇಜು ಸಾಕ್ಷ್ಯ ಅಧಿನಿಯಮ, ೧೯೩೯ (೪) ಔದ್ಯಮಿಕ ವಿವಾದ (ಬ್ಯಾಂಕಿಂಗ್ ಮತ್ತು ವಿಮಾ ಕಂಪನಿ) ಅಧಿನಿಯಮ, ೧೯೪೯ (೫) ವಿಚಾರಣಾ ಆಯೋಗ ಅಧಿನಿಯಮ, ೧೯೫೨ (೬) ಉದ್ಯೋಗ ವಿನಿಮಯ ಕಚೇರಿಗಳ (ಖಾಲಿ ಸ್ಥಾನಗಳ ಕಡ್ಡಾಯ ಅಧಿಸೂಚನೆ) ಅಧಿನಿಯಮ, ೧೯೫೯.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

## ಸೊಸೈಟಿಗಳ ನೋಂದಣಿ ಅಧಿನಿಯಮ, 1860

## (1860ರ ಸಂಖ್ಯೆ 21)

[21ನೇ ಮೇ, 1860.]

ಸಾಹಿತ್ಯಿಕ, ವೈಜ್ಞಾನಿಕ ಮತ್ತು ಧರ್ಮಾರ್ಥ ಸೊಸೈಟಿಗಳ ನೋಂದಣಿಗಾಗಿ ಅಧಿನಿಯಮ.

**ಪ್ರಸ್ತಾವನೆ.–** ಸಾಹಿತ್ಯ, ವಿಜ್ಞಾನ ಅಥವಾ ಲಲಿತಕಲೆಗಳ ಸಂವರ್ಧನೆಗಾಗಿ ಅಥವಾ ಉಪಯುಕ್ತ ಜ್ಞಾನದ ಪ್ರಸರಣಕ್ಕಾಗಿ, ರಾಜಕೀಯ ಶಿಕ್ಷಣದ ಪ್ರಸರಣಕ್ಕಾಗಿ ಅಥವಾ ಧರ್ಮಾರ್ಥ ಉದ್ದೇಶಗಳಿಗಾಗಿ ಸ್ಥಾಪಿಸಲಾದ ಸೊಸೈಟಿಗಳ ಕಾನೂನು ಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ, ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ.

**1. ಸಂಘದ ವಿವರಣಪತ್ರ ಮತ್ತು ನೋಂದಣಿಯ ಮೂಲಕ ಸೊಸೈಟಿಗಳ ರಚನೆ.–** ಯಾವುದೇ ಸಾಹಿತ್ಯಿಕ, ವೈಜ್ಞಾನಿಕ ಅಥವಾ ಧರ್ಮಾರ್ಥ ಉದ್ದೇಶಕ್ಕಾಗಿ ಅಥವಾ ಈ ಅಧಿನಿಯಮದ 20ನೇ ಪ್ರಕರಣದಲ್ಲಿ ವಿವರಿಸಲಾದಂಥ ಯಾವುದೇ ಉದ್ದೇಶಕ್ಕಾಗಿ ಒಡಗೂಡಿದ ಯಾರಾದರೂ ಏಳು ಅಥವಾ ಹೆಚ್ಚು ವ್ಯಕ್ತಿಗಳು ಸಂಘದ ವಿವರಣಪತ್ರದಲ್ಲಿ ತಮ್ಮ ಹೆಸರುಗಳನ್ನು ಬರೆದು ಸಹಿ ಹಾಕುವ ಮತ್ತು ಅದನ್ನು ಜಾಯಿಂಟ್ ಸ್ಟಾಕ್ ಕಂಪನಿಗಳ ರಿಜಿಸ್ಟ್ರಾರ್‌ನ ಬಳಿ ದಾಖಲು ಮಾಡುವ ಮೂಲಕ ಈ ಅಧಿನಿಯಮದ ಮೇರೆಗೆ ತಮ್ಮದೇ ಆದ ಒಂದು ಸೊಸೈಟಿಯನ್ನು ರಚಿಸಿಕೊಳ್ಳಬಹುದು.

**2. ಸಂಘದ ವಿವರಣಪತ್ರ.–** ಸಂಘದ ವಿವರಣಪತ್ರವು ಈ ಕೆಳಕಂಡ ವಿಷಯಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

ಸೊಸೈಟಿಯ ಹೆಸರು;

ಸೊಸೈಟಿಯ ಉದ್ದೇಶಗಳು;

ಸೊಸೈಟಿಯ ನಿಯಮಗಳ ಮೂಲಕ ಅದರ ವ್ಯವಹಾರಗಳ ಆಡಳಿತವನ್ನು ಯಾರಿಗೆ ಒಪ್ಪಿಸಲಾಗಿದೆಯೋ ಆ ಆಡಳಿತ ನಿರ್ವಾಹಕರು, ಪರಿಷತ್ತು, ನಿರ್ದೇಶಕರು, ಸಮಿತಿ ಅಥವಾ ಇತರ ಆಡಳಿತ ನಿಕಾಯದ ಹೆಸರುಗಳು, ವಿಳಾಸಗಳು ಮತ್ತು ಉದ್ಯೋಗಗಳು;

ಕೊನೆಯ ಪಕ್ಷ ಆಡಳಿತ ನಿಕಾಯದ ಮೂವರು ಸದಸ್ಯರಿಂದ ಸರಿಯಾದ ಪ್ರತಿ ಎಂದು ಪ್ರಮಾಣೀಕರಿಸಲ್ಪಟ್ಟ, ಸೊಸೈಟಿಯ ನಿಯಮಗಳ ಮತ್ತು ವಿನಿಯಮನಗಳ ಪ್ರತಿಯನ್ನು ಸಂಘದ ವಿವರಣಪತ್ರದ ಜೊತೆಗೆ ದಾಖಲು ಮಾಡತಕ್ಕದ್ದು.

**3. ನೋಂದಣಿ ಮತ್ತು ಫೀಜು.–** (1) ಅಂಥ ವಿವರಪತ್ರ ಹಾಗೂ ಪ್ರಮಾಣಿತ ಪ್ರತಿಯನ್ನು ದಾಖಲು ಮಾಡಿದ ಮೇಲೆ ರಿಜಿಸ್ಟ್ರಾರನು ಈ ಅಧಿನಿಯಮದ ಮೇರೆಗೆ ಆ ಸೊಸೈಟಿಯು ನೋಂದಣಿಯಾಗಿದೆ ಎಂದು ತನ್ನ ಹಸ್ತಾಕ್ಷರದೊಂದಿಗೆ ಪ್ರಮಾಣೀಕರಿಸತಕ್ಕದ್ದು. ಅಂಥ ಪ್ರತಿಯೊಂದು ನೋಂದಣಿಗೂ, ಐವತ್ತು ರೂಪಾಯಿಗಳ ಫೀಜನ್ನು ಅಥವಾ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದೇಶಿಸಬಹುದಾದಂಥ ಕಡಿಮೆ ಫೀಜನ್ನು ರಿಜಿಸ್ಟ್ರಾರನಿಗೆ ಸಂದಾಯ ಮಾಡತಕ್ಕದ್ದು ಮತ್ತು ಹಾಗೆ ಸಂದಾಯ ಮಾಡಿದ ಎಲ್ಲ ಫೀಜುಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಲೆಕ್ಕ ಕೊಡತಕ್ಕದ್ದು.

**4. ವ್ಯವಸ್ಥಾಪಕ ನಿಕಾಯದ ವಾರ್ಷಿಕ ಪಟ್ಟಿಯನ್ನು ದಾಖಲು ಮಾಡುವುದು.–** ಪ್ರತಿ ವರ್ಷಕ್ಕೊಮ್ಮೆ, ಸೊಸೈಟಿಯ ನಿಯಮಗಳಿಗನುಗುಣವಾಗಿ ಸೊಸೈಟಿಯ ವಾರ್ಷಿಕ ಸಾಮಾನ್ಯ ಸಭೆಯು ನಡೆದ ದಿನದ ತರುವಾಯದ ಹದಿನಾಲ್ಕನೇ ದಿನದಂದು ಅಥವಾ ಅದಕ್ಕೆ ಮುಂಚೆ ಅಥವಾ ನಿಯಮಗಳು ವಾರ್ಷಿಕ ಸಾಮಾನ್ಯ ಸಭೆಗೆ ಉಪಬಂಧವನ್ನು ಕಲ್ಪಿಸಿರದಿದ್ದರೆ, ಜನವರಿ ತಿಂಗಳಲ್ಲಿ, ಆಗ ಸೊಸೈಟಿಯ ವ್ಯವಹಾರಗಳ ನಿರ್ವಹಣೆಯನ್ನು ವಹಿಸಿಕೊಡಲಾಗಿರುವ ಆಡಳಿತ ನಿರ್ವಾಹಕರು, ಪರಿಷತ್ತು, ನಿರ್ದೇಶಕರು, ಸಮಿತಿ ಅಥವಾ ಇತರ ಆಡಳಿತ ನಿಕಾಯದ ಹೆಸರುಗಳ, ವಿಳಾಸಗಳ ಮತ್ತು ಉದ್ಯೋಗಗಳ ಪಟ್ಟಿಯನ್ನು ಜಾಯಿಂಟ್ ಸ್ಟಾಕ್ ಕಂಪನಿಗಳ ರಿಜಿಸ್ಟ್ರಾರನ ಬಳಿ ದಾಖಲು ಮಾಡತಕ್ಕದ್ದು.

**5. ಸೊಸೈಟಿಯ ಸ್ವತ್ತು ಹೇಗೆ ವಿಹಿತವಾಗುವುದು.–** ಈ ಅಧಿನಿಯಮದ ಮೇರೆಗೆ ನೋಂದಾಯಿಸಲಾದ ಸೊಸೈಟಿಗೆ ಸೇರಿದ ಚರ ಮತ್ತು ಸ್ಥಿರ ಸ್ವತ್ತು ನ್ಯಾಸಧಾರಿಗಳಲ್ಲಿ ನಿಹಿತವಾಗಿರದಿದ್ದಲ್ಲಿ, ತಾತ್ಕಾಲಿಕವಾಗಿ ಅಂಥ ಸೊಸೈಟಿಯ ಆಡಳಿತ ನಿಕಾಯದಲ್ಲಿ ನಿಹಿತವಾಗಿರುತ್ತದೆ ಎಂದು ಭಾವಿಸತಕ್ಕದ್ದು ಮತ್ತು ಎಲ್ಲ ಸಿವಿಲ್ ಮತ್ತು ಕ್ರಿಮಿನಲ್ ವ್ಯವಹರಣೆಗಳಲ್ಲಿ ಆ ಸೊಸೈಟಿಯ ಆಡಳಿತ ನಿಕಾಯದ ಸ್ವತ್ತೆಂದು ಅವರ ಅಂಕಿತನಾಮದ ಮೂಲಕ ವಿವರಿಸಬಹುದು.

**6. ಸೊಸೈಟಿಗಳಿಂದ ಮತ್ತು ಅವುಗಳ ವಿರುದ್ಧವಾಗಿ ದಾವೆಗಳು.–** ಈ ಅಧಿನಿಯಮದ ಮೇರೆಗೆ ನೋಂದಾಯಿಸಲಾದ ಪ್ರತಿಯೊಂದು ಸೊಸೈಟಿಯೂ ಸೊಸೈಟಿಯ ನಿಯಮಗಳು ಮತ್ತು ವಿನಿಯಮಗಳ ಮೂಲಕ ನಿರ್ಧರಿಸಲಾಗುವಂತೆ ಅಧ್ಯಕ್ಷ, ಸಭಾಪತಿ, ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ನ್ಯಾಸಧಾರಿಗಳ ಹೆಸರಿನಲ್ಲಿ ದಾವೆಯನ್ನು ಹೂಡಬಹುದು ಅಥವಾ ದಾವೆಗೆ ಗುರಿಯಾಗಬಹುದು ಮತ್ತು ಹಾಗೆ ನಿರ್ಧರಿಸಲು ತಪ್ಪಿದಲ್ಲಿ ಆಡಳಿತ ನಿಕಾಯವು, ಆ ಸಂದರ್ಭಕ್ಕಾಗಿ ನೇಮಿಸತಕ್ಕಂಥ ವ್ಯಕ್ತಿಯ ಹೆಸರಿನಲ್ಲಿ ದಾವೆಯನ್ನು ಹೂಡಬಹುದು ಅಥವಾ ದಾವೆಗೆ ಗುರಿಯಾಗಬಹುದು:

ಪರಂತು, ಸೊಸೈಟಿಯ ವಿರುದ್ಧ ಯಾವುದೇ ಕ್ಲೇಮನ್ನು ಅಥವಾ ತಗಾದೆಯನ್ನು ಹೊಂದಿರುವ ಯಾರೇ ವ್ಯಕ್ತಿಯು, ಆಡಳಿತ ನಿಕಾಯಕ್ಕೆ ಅರ್ಜಿ ಸಲ್ಲಿಸಿದಲ್ಲಿ, ಬೇರೊಬ್ಬ ಅಧಿಕಾರಿ ಅಥವಾ ವ್ಯಕ್ತಿಯನ್ನು

ಪ್ರತಿವಾದಿಯಾಗಿ ನಾಮನಿರ್ದೇಶಿಸಿರದಿದ್ದರೆ, ಅದರ ಅಧ್ಯಕ್ಷ ಅಥವಾ ಸಭಾಪತಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ನ್ಯಾಸಧಾರಿಗಳ ಮೇಲೆ ದಾವೆ ಹೂಡುವುದು ಸಕ್ಷಮವಾಗಿರತಕ್ಕದ್ದು.

**7. ದಾವೆಗಳು ಕೊನೆಗೊಳ್ಳತಕ್ಕದ್ದಲ್ಲ.–** ಯಾವುದೇ ಸಿವಿಲ್ ನ್ಯಾಯಾಲಯದಲ್ಲಿರುವ ಯಾವುದೇ ದಾವೆ ಅಥವಾ ವ್ಯವಹರಣೆಯು, ಯಾರಿಂದ ಅಥವಾ ಯಾರ ವಿರುದ್ಧವಾಗಿ ಅಂಥ ದಾವೆಯನ್ನು ಅಥವಾ ವ್ಯವಹರಣೆಯನ್ನು ಹೂಡಲಾಗುತ್ತಿತ್ತೊ ಅಥವಾ ಮುಂದುವರಿಸಲಾಗುತ್ತಿತ್ತೊ ಆ ವ್ಯಕ್ತಿಯ ಮರಣದಿಂದಾಗಿ ಅಥವಾ ಯಾವ ಹೆಸರಿನಲ್ಲಿ ಅವನು ದಾವೆಯನ್ನು ಹೂಡುತ್ತಿದ್ದನೋ ಅಥವಾ ದಾವೆಗೆ ಗುರಿಯಾಗುತ್ತಿದ್ದನೋ ಆ ಹೆಸರಿನಲ್ಲಿ ಮುಂದುವರಿಯುವುದು ನಿಂತುಹೋದ ಕಾರಣದಿಂದಾಗಿ ಕೊನೆಗೊಳ್ಳತಕ್ಕದ್ದಲ್ಲ ಅಥವಾ ಮುಂದುವರಿಯುವುದು ನಿಲ್ಲತಕ್ಕದ್ದಲ್ಲ. ಆದರೆ ಅದೇ ದಾವೆಯು ಅಥವಾ ವ್ಯವಹರಣೆಯು ಅಂಥ ವ್ಯಕ್ತಿಯ ಉತ್ತರಾಧಿಕಾರಿಯ ಹೆಸರಿನಲ್ಲಿ ಅಥವಾ ಅವನ ವಿರುದ್ಧವಾಗಿ ಮುಂದುವರಿಯತಕ್ಕದ್ದು.

**8. ಸೊಸೈಟಿಯ ವಿರುದ್ಧ ತೀರ್ಪಿನ ಜಾರಿ.–** ಸೊಸೈಟಿಯ ಪರವಾಗಿ ಹೆಸರಿಸಲಾದ ವ್ಯಕ್ತಿ ಅಥವಾ ಅಧಿಕಾರಿಯ ವಿರುದ್ಧ ತೀರ್ಪನ್ನು ಪಡೆಯಲಾಗಿದ್ದರೆ ಅಂಥ ತೀರ್ಪನ್ನು, ಅಂಥ ವ್ಯಕ್ತಿಯ ಅಥವಾ ಅಧಿಕಾರಿಯ ಚರ ಅಥವಾ ಸ್ಥಿರ ಸ್ವತ್ತಿನ ವಿರುದ್ಧವಾಗಿಯಾಗಲಿ ಅಥವಾ ವೈಯಕ್ತಿಕವಾಗಿಯಾಗಲಿ ಜಾರಿಗೆ ತರತಕ್ಕದ್ದಲ್ಲ, ಆದರೆ ಆ ಸೊಸೈಟಿಯ ಸ್ವತ್ತಿನ ವಿರುದ್ಧವಾಗಿ ಜಾರಿಗೆ ತರತಕ್ಕದ್ದು.

ಅಮಲ್ಜಾರಿಗಾಗಿ ಮಾಡಿದ ಅರ್ಜಿಯಲ್ಲಿ ತೀರ್ಪು, ಸಂಘದ ಪರವಾಗಿ ಮಾತ್ರವೇ ಸಂದರ್ಭಾನುಸಾರ ದಾವೆಯನ್ನು ಹೂಡಿರುವ ಅಥವಾ ದಾವೆಗೆ ಗುರಿಯಾಗಿರುವ ಪಕ್ಷಕಾರನ ವಿರುದ್ಧವಾಗಿ ತೀರ್ಪನ್ನು ಪಡೆದಿರುವ ಸಂಗತಿಯನ್ನು ನಮೂದಿಸತಕ್ಕದ್ದು ಮತ್ತು ಅಂಥ ತೀರ್ಪನ್ನು ಸೊಸೈಟಿಯ ಸ್ವತ್ತಿನ ಮೇಲೆ ಜಾರಿ ಮಾಡಲು ಅಗತ್ಯಪಡಿಸತಕ್ಕದ್ದು.

**9. ಉಪವಿಧಿಯ ಮೇರೆಗೆ ಪ್ರಾಪ್ತವಾಗುವ ದಂಡದ ವಸೂಲಿ.–** ಸೊಸೈಟಿಯ ನಿಯಮಗಳು ಮತ್ತು ವಿನಿಯಮಗಳಿಗೆ ಅನುಸಾರವಾಗಿ, ಕ್ರಮಬದ್ಧವಾಗಿ ರಚಿಸಲಾದ ಯಾವುದೇ ಉಪವಿಧಿಯ ಮೇರೆಗೆ ಅಥವಾ ನಿಯಮಗಳು ಉಪವಿಧಿಗಳನ್ನು ರಚಿಸಲು ಉಪಬಂಧಿಸದಿದ್ದರೆ, ಆ ಉದ್ದೇಶಕ್ಕಾಗಿ ಕರೆಯಲಾದ ಸಂಘದ ಸದಸ್ಯರುಗಳ ಸಾಮಾನ್ಯ ಸಭೆಯಲ್ಲಿ ರಚಿಸಲಾದ ಉಪವಿಧಿಯ ಮೇರೆಗೆ (ಹಾಗೆ ಅದನ್ನು ರಚಿಸಲು ಅಂಥ ಸಭೆಯಲ್ಲಿ ಹಾಜರಿದ್ದ ಸದಸ್ಯರ ಐದನೇ ಮೂರು ಭಾಗದ ಸದಸ್ಯರ ಸಮವರ್ತಿ ಮತಗಳು ಅವಶ್ಯಕವಾಗಿರತಕ್ಕದ್ದು) ಸೊಸೈಟಿಯ ಯಾವುದೇ ನಿಯಮ ಅಥವಾ ಉಪವಿಧಿಯ ಉಲ್ಲಂಘನೆಗಾಗಿ ಯಾವುದೇ ಹಣ ರೂಪದ ದಂಡವನ್ನು ವಿಧಿಸಿದರೆ, ಅಂಥ ದಂಡವು ಒದಗಿಬಂದಾಗ ಸಂಘದ ಆಡಳಿತ ನಿಕಾಯವು ವಿಹಿತವೆಂದು ಭಾವಿಸತಕ್ಕಂತೆ, ಪ್ರತಿವಾದಿಯು ವಾಸಿಸುತ್ತಿರತಕ್ಕ ಅಥವಾ

ಸೊಸೈಟಿಯು ಇರತಕ್ಕ ಸ್ಥಳದ ಮೇಲೆ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಯಾವುದೇ ನ್ಯಾಯಾಲಯದಲ್ಲಿ ವಸೂಲು ಮಾಡಬಹುದು.

**10. ಆಗಂತುಕರ ಹಾಗೆ ಸದಸ್ಯರು ದಾವೆಗೆ ಗುರಿಯಾಗುವುದು.–** ಸೊಸೈಟಿಯ ನಿಯಮಗಳಿಗೆ ಅನುಸಾರವಾಗಿ ತಾನು ಸಂದಾಯ ಮಾಡಲು ಬದ್ಧನಾಗಿದ್ದು ವಂತಿಗೆಯನ್ನು ಬಾಕಿ ಉಳಿಸಿಕೊಂಡಿರಬಹುದಾದ ಅಥವಾ ಅಂಥ ನಿಯಮಗಳಿಗೆ ತಕ್ಕ ಅಥವಾ ತಡೆಹಿಡಿದುಕೊಂಡಿರುವ ಅಥವಾ ಸೊಸೈಟಿಯ ಯಾವುದೇ ಸ್ವತ್ತನ್ನು ಕ್ಷತಿಗೊಳಿಸುವ ಅಥವಾ ನಾಶಗೊಳಿಸುವ ಯಾರೇ ಸದಸ್ಯನ ಮೇಲೆ ಅಂಥ ಬಾಕಿಗಾಗಿ ಅಥವಾ ಈ ಹಿಂದೆ ಉಪಬಂಧಿಸಿದ ರೀತಿಯಲ್ಲಿ ಅಂಥ ಸ್ವತ್ತನ್ನು ತಡೆಹಿಡಿದಿರುವುದು, ಕ್ಷತಿ ಅಥವಾ ನಾಶದಿಂದಾಗಿ ಪ್ರಾಪ್ತವಾಗಿರುವ ಹಾನಿಗಾಗಿ ಹೂಡಬಹುದು.

**ನ್ಯಾಯ ನಿರ್ಣೀತ ಖರ್ಚುಗಳನ್ನು ಯಶಸ್ವಿ ಪ್ರತಿವಾದಿಯು ವಸೂಲು ಮಾಡಿಕೊಳ್ಳುವುದು.–** ಆದರೆ, ಸೊಸೈಟಿಯ ಸೂಚನೆಯ ಮೇರೆಗೆ ತನ್ನ ವಿರುದ್ಧ ಹೂಡಲಾದ ಯಾವುದೇ ದಾವೆ ಅಥವಾ ಇತರ ವ್ಯವಹರಣೆಯಲ್ಲಿ ಪ್ರತಿವಾದಿಯು ಯಶಸ್ವಿಯಾದಲ್ಲಿ ಮತ್ತು ತನ್ನ ಖರ್ಚುಗಳನ್ನು ವಸೂಲು ಮಾಡಿಕೊಳ್ಳಲು ನ್ಯಾಯ ನಿರ್ಣೀತವಾದಲ್ಲಿ ಆತನು ಆ ಖರ್ಚುಗಳನ್ನು ಯಾರ ಹೆಸರಿನಲ್ಲಿ ಆ ದಾವೆಯನ್ನು ಹೂಡಲಾಯಿತೋ ಆ ಅಧಿಕಾರಿಯಿಂದಲೋ ಅಥವಾ ಸೊಸೈಟಿಯಿಂದಲೋ ಅದನ್ನು ವಸೂಲು ಮಾಡಿಕೊಳ್ಳಲು ಮುಂದುವರಿಯುವ ಬಗ್ಗೆ ಆಯ್ಕೆ ಮಾಡಿಕೊಳ್ಳಬಹುದು ಮತ್ತು ಎರಡನೆಯ ಸಂದರ್ಭದಲ್ಲಿ ಮೇಲೆ ವಿವರಿಸಲಾದ ರೀತಿಯಲ್ಲಿ ಸದರಿ ಸೊಸೈಟಿಯ ಸ್ವತ್ತಿನ ವಿರುದ್ಧವಾಗಿ ಕ್ರಮ ಕೈಗೊಳ್ಳತಕ್ಕದ್ದು.

**11. ಅಪರಾಧಗಳ ಬಗ್ಗೆ ತಪ್ಪಿತಸ್ಥರಾದ ಸದಸ್ಯರು ಆಗಂತುಕರ ಹಾಗೆ ದಂಡನೀಯರಾಗುವುದು.–** ಸೊಸೈಟಿಯ ಯಾರೇ ಸದಸ್ಯನು, ಯಾವುದೇ ಹಣ ಅಥವಾ ಇತರ ಸ್ವತ್ತನ್ನು ಕದ್ದರೆ, ಅಪಹರಿಸಿದರೆ ಅಥವಾ ಅಪರಾಧಿಕ ದುರ್ವಿನಿಯೋಗ ಮಾಡಿದರೆ ಅಥವಾ ಉದ್ದೇಶಪೂರ್ವಕವಾಗಿ ಮತ್ತು ದೋಷಪೂರ್ವಕವಾಗಿ ಅಂಥ ಸೊಸೈಟಿಯ ಯಾವುದೇ ಸ್ವತ್ತನ್ನು ನಾಶಪಡಿಸಿದರೆ ಅಥವಾ ಕ್ಷತಿಗೊಳಿಸಿದರೆ ಅಥವಾ ಸೊಸೈಟಿಯ ನಿಧಿಗಳು ನಷ್ಟಕ್ಕೆ ಈಡಾಗುವಂತೆ ಯಾವುದೇ ಪತ್ರ, ಬಂಧಪತ್ರ, ಹಣಕ್ಕಾಗಿ ಭದ್ರತೆ, ರಸೀದಿ ಅಥವಾ ಇತರ ಲಿಖಿತಗಳನ್ನು ಸುಳ್ಳು ಸೃಷ್ಟನೆ ಮಾಡಿದರೆ, ಅದೇ ರೀತಿಯ ಅಪರಾಧದ ಸಂಬಂಧದಲ್ಲಿ ಸದಸ್ಯನಲ್ಲದ ಯಾರೇ ವ್ಯಕ್ತಿಯು ಒಳಗಾಗುವ ಮತ್ತು ಹೊಣೆಯಾಗುವ ಹಾಗೆ ಅದೇ ತರಹದ ಪ್ರಾಸಿಕ್ಯೂಷನ್‌ಗೆ ಒಳಗಾಗತಕ್ಕದ್ದು ಮತ್ತು ಅಪರಾಧ ನಿರ್ಣೀತನಾದಲ್ಲಿ ಅದೇ ರೀತಿಯಲ್ಲಿ ದಂಡನೆಗೆ ಗುರಿಯಾಗತಕ್ಕದ್ದು.

**12. ತಮ್ಮ ಉದ್ದೇಶಗಳನ್ನು ವ್ಯತ್ಯಾಸಗೊಳಿಸಲು, ವಿಸ್ತರಿಸಲು ಅಥವಾ ಸಂಕ್ಷಿಪ್ತಗೊಳಿಸಲು ಸೊಸೈಟಿಗಳಿಗೆ ಅವಕಾಶ ನೀಡುವುದು.–** ಯಾವುದೇ ನಿರ್ದಿಷ್ಟ ಉದ್ದೇಶ ಅಥವಾ ಉದ್ದೇಶಗಳಿಗಾಗಿ

ಸ್ಥಾಪಿಸಲಾದ, ಈ ಅಧಿನಿಯಮದ ಮೇರೆಗೆ ನೋಂದಾಯಿತವಾದ ಯಾವುದೇ ಸೊಸೈಟಿಯ ಆಡಳಿತ ನಿಕಾಯಕ್ಕೆ, ಈ ಅಧಿನಿಯಮದ ಅರ್ಥವ್ಯಾಪ್ತಿಯ ಒಳಗೆ ಅಂಥ ಉದ್ದೇಶವನ್ನು ಇತರ ಉದ್ದೇಶಗಳಿಗೆ ಅಥವಾ ಉದ್ದೇಶಗಳಿಗಾಗಿ ವ್ಯತ್ಯಾಸಗೊಳಿಸುವುದು, ವಿಸ್ತರಿಸುವುದು ಅಥವಾ ಸಂಕ್ಷಿಪ್ತಗೊಳಿಸುವುದು ಅಥವಾ ಅಂಥ ಸೊಸೈಟಿಯನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಯಾವುದೇ ಇತರ ಸೊಸೈಟಿಯೊಂದಿಗೆ ಸಮ್ಮಿಳನಗೊಳಿಸುವುದು ಸೂಕ್ತ ಎಂದು ಕಂಡುಬಂದಾಗಲೆಲ್ಲ ಅಂಥ ಆಡಳಿತ ನಿಕಾಯವು ಲಿಖಿತ ಅಥವಾ ಮುದ್ರಿತ ವರದಿಯಲ್ಲಿ ಸೊಸೈಟಿಯ ಸದಸ್ಯರಿಗೆ ಆ ಪ್ರಸ್ತಾಪವನ್ನು ಒಪ್ಪಿಸಬಹುದು ಮತ್ತು ಅದರ ಪರ್ಯಾಲೋಚನೆಗಾಗಿ ಸೊಸೈಟಿಯ ವಿನಿಯಮನಗಳಿಗೆ ಅನುಸಾರವಾಗಿ ಒಂದು ವಿಶೇಷ ಸಭೆಯನ್ನು ಕರೆಯಬಹುದು.

ಆದರೆ ಪರ್ಯಾಲೋಚನೆಗಾಗಿ ಆಡಳಿತ ನಿಕಾಯವು ಕರೆದ ವಿಶೇಷ ಸಭೆಗೆ ಹತ್ತು ದಿನಗಳಿಗೆ ಮೊದಲು ಸೊಸೈಟಿಯ ಪ್ರತಿಯೊಬ್ಬ ಸದಸ್ಯನಿಗೆ, ಅಂಥ ವರದಿಯನ್ನು ಮುಟ್ಟಿಸಿದ್ದ ಅಥವಾ ಅಂಚೆಯ ಮೂಲಕ ಕಳುಹಿಸಿದ್ದ ಹೊರತು ಅಥವಾ ಐದನೇ ಮೂರು ಭಾಗ ಸದಸ್ಯರು ಖುದ್ದಾಗಿ ಅಥವಾ ಪ್ರತಿನಿಧಿ ಪತ್ರದಿಂದ ಮತನೀಡುವ ಮೂಲಕ ಅಂಥ ಪ್ರಸ್ತಾಪನೆಯ ಹಿಂದಿನ ಸಭೆಯ ತರುವಾಯ ಒಂದು ತಿಂಗಳ ಮಧ್ಯಂತರದಲ್ಲಿ ಆಡಳಿತ ನಿಕಾಯವು ಕರೆದ ಎರಡನೇ ವಿಶೇಷ ಸಭೆಯಲ್ಲಿ ಹಾಜರಿದ್ದ ಐದನೇ ಮೂರು ಭಾಗ ಸದಸ್ಯರು ಮತಗಳ ಮೂಲಕ ಸ್ಥಿರೀಕರಿಸಿದ ಹೊರತು ಅಂಥ ಯಾವುದೇ ಪ್ರಸ್ತಾಪವನ್ನು ಕಾರ್ಯರೂಪಕ್ಕೆ ತರತಕ್ಕದ್ದಲ್ಲ.

**13. ಸೊಸೈಟಿ ವಿಘಟನೆ ಮತ್ತು ಅವುಗಳ ವ್ಯವಹಾರಗಳ ಹೊಂದಾಣಿಕೆ ಬಗ್ಗೆ ಉಪಬಂಧ.–** ಯಾವುದೇ ಸೊಸೈಟಿಯ ಸದಸ್ಯರಲ್ಲಿ ಐದನೇ ಮೂರು ಭಾಗಕ್ಕೆ ಕಡಿಮೆಯಿಲ್ಲದ ಯಾವುದೇ ಸಂಖ್ಯೆಯ ಸದಸ್ಯರು ಅದು ವಿಘಟಿತವಾಗತಕ್ಕದ್ದೆಂದು ನಿರ್ಧರಿಸತಕ್ಕದ್ದು ಮತ್ತು ಅದರ ಮೇಲೆ ಸೊಸೈಟಿಯನ್ನು ತತ್‌ಕ್ಷಣವೇ ಅಥವಾ ಆ ಬಗ್ಗೆ ಒಪ್ಪಿತವಾದ ಸಮಯಕ್ಕೆ ಸೊಸೈಟಿಯನ್ನು ವಿಘಟನೆಗೊಳಿಸತಕ್ಕದ್ದು. ಸದರಿ ಸೊಸೈಟಿಗಳಿಗೆ ಅನ್ವಯವಾಗುವ ನಿಯಮಗಳು ಯಾವುವಾದರೂ ಇದ್ದರೆ, ಅವುಗಳಿಗೆ ಅನುಸಾರವಾಗಿ ಮತ್ತು ಇಲ್ಲದಿದ್ದರೆ ಆಗ ಆಡಳಿತ ನಿಕಾಯಕ್ಕೆ ವಿಹಿತವೆಂದು ಕಂಡುಬಂದಂತೆ ಸೊಸೈಟಿಯ ಸ್ವತ್ತಿನ, ಅದರ ಕ್ಲೇಮುಗಳ ಮತ್ತು ಹೊಣೆಗಳ ವಿಲೆ ಮತ್ತು ವ್ಯವಸ್ಥೆಗಾಗಿ ಎಲ್ಲ ಅವಶ್ಯ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು. ಪರಂತು, ಸೊಸೈಟಿಯ ಸದರಿ ವ್ಯವಸ್ಥಾಪಕ ನಿಕಾಯದ ಅಥವಾ ಸೊಸೈಟಿಯ ಸದಸ್ಯರ ಮಧ್ಯೆ ಯಾವುದೇ ವಿವಾದ ಉಂಟಾದ ಸಂದರ್ಭದಲ್ಲಿ ಸದರಿ ಹೊಂದಾಣಿಕೆಯ ವಿಷಯವನ್ನು ಸೊಸೈಟಿಯ ಮುಖ್ಯ ಕಟ್ಟಡವು ಇರುವ ಜಿಲ್ಲೆಯ ಮೂಲ ಸಿವಿಲ್ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಪ್ರಧಾನ ನ್ಯಾಯಾಲಯಕ್ಕೆ ಕಳುಹಿಸತಕ್ಕದ್ದು ಮತ್ತು ನ್ಯಾಯಾಲಯವು ಈ ವಿಷಯದಲ್ಲಿ ತಾನು ಅವಶ್ಯವೆಂದು ಭಾವಿಸುವಂಥ ಆದೇಶವನ್ನು ಮಾಡತಕ್ಕದ್ದು:

ಪರಂತು, ಆ ಉದ್ದೇಶಕ್ಕಾಗಿ ಕರೆಯಲಾದ ಸಾಮಾನ್ಯ ಸಭೆಯಲ್ಲಿ ಐದನೇ ಮೂರು ಭಾಗದ ಸದಸ್ಯರು ಖುದ್ದಾಗಿ ಅಥವಾ ಪ್ರತಿನಿಧಿ ಪತ್ರದಿಂದ ತಮ್ಮ ಮತಗಳನ್ನು ನೀಡುವ ಮೂಲಕ ಅಂಥ ವಿಘಟನೆಗಾಗಿ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದ ಹೊರತು ಯಾವುದೇ ಸೊಸೈಟಿಯು ವಿಘಟಿತವಾಗತಕ್ಕದ್ದಲ್ಲ:

ಪರಂತು, ಈ ಅಧಿನಿಯಮದ ಮೇರೆಗೆ ನೋಂದಾಯಿತವಾದ ಯಾವುದೇ ಸೊಸೈಟಿಯಲ್ಲಿ ಯಾವುದೇ ಸರ್ಕಾರವು ಸದಸ್ಯತ್ವ ಹೊಂದಿರುವಲ್ಲಿ ಅಥವಾ ಅದಕ್ಕೆ ವಂತಿಗೆದಾರವಾಗಿರುವಲ್ಲಿ ಅಥವಾ ಅವರಲ್ಲಿ ಅನ್ಯಥಾ ಹಿತಾಸಕ್ತಿಯನ್ನು ಹೊಂದಿರುವಲ್ಲಿ ಅಂಥ ಸೊಸೈಟಿಯನ್ನು ಯಾವ ರಾಜ್ಯದಲ್ಲಿ ನೋಂದಣಿಯಾಗಿದೆಯೋ ಆ ಸರ್ಕಾರದ ಸಮ್ಮತಿಯಿಲ್ಲದೆ ವಿಘಟಿಸತಕ್ಕದ್ದಲ್ಲ.

**14. ವಿಘಟಿತವಾದ ಮೇಲೆ ಯಾವ ಸದಸ್ಯನೂ ಲಾಭವನ್ನು ಪಡೆಯುವಂತಿಲ್ಲ.–** ಈ ಅಧಿನಿಯಮದ ಮೇರೆಗೆ ನೋಂದಾಯಿತವಾದ ಸೊಸೈಟಿಯು ವಿಘಟಿತವಾದ ನಂತರ ಅದರ ಎಲ್ಲ ಸಾಲಗಳು ಮತ್ತು ಹೊಣೆಗಳ ತೀರಿಕೆಯಾದ ಬಳಿಕ ಯಾವುದಾದರೂ ಸ್ವತ್ತು ಉಳಿದಿದ್ದರೆ, ಅದನ್ನು ಸದರಿ ಸೊಸೈಟಿಯ ಸದಸ್ಯರೊಳಗೆ ಅಥವಾ ಅದರಲ್ಲಿ ಯಾರಿಗೇ ಆಗಲಿ ಸಂದಾಯ ಮಾಡತಕ್ಕದ್ದಲ್ಲ ಅಥವಾ ಹಂಚತಕ್ಕದ್ದಲ್ಲ. ಆದರೆ ವಿಘಟನೆಯ ಸಮಯದಲ್ಲಿ ಖುದ್ದಾಗಿ ಅಥವಾ ಪ್ರತಿನಿಧಿ ಪತ್ರದ ಮೂಲಕ ಹಾಜರಾದ ಸದಸ್ಯರ ಪೈಕಿ ಐದನೇ ಮೂರು ಭಾಗಕ್ಕಿಂತ ಕಡಿಮೆ ಇಲ್ಲದ ಸದಸ್ಯರ ಮತಗಳಿಂದ ನಿರ್ಧರಿಸಬೇಕಾದ ಅಥವಾ ಅದಕ್ಕೆ ತಪ್ಪಿದಲ್ಲಿ ಮೇಲೆ ಹೇಳಿದಂಥ ನ್ಯಾಯಾಲಯವು ನಿರ್ಧರಿಸಬೇಕಾದ ಯಾವುದೇ ಇತರ ಸೊಸೈಟಿಗೆ ನೀಡತಕ್ಕದ್ದು.

**ಈ ಖಂಡವು ಜಾಯಿಂಟ್ ಸ್ಟಾಕು ಕಂಪನಿಗಳಿಗೆ ಅನ್ವಯಿಸತಕ್ಕದ್ದಲ್ಲ.–** ಪರಂತು, ಆದಾಗ್ಯೂ ಷೇರುದಾರರ ವಂತಿಗೆಗಳಿಂದ ಜಾಯಿಂಟ್ ಸ್ಟಾಕು ಕಂಪನಿಯ ಸ್ವರೂಪದಲ್ಲಿ ಸಂಸ್ಥಾಪಿಸಲಾದ ಅಥವಾ ಸ್ಥಾಪಿಸಲಾದ ಯಾವುದೇ ಸೊಸೈಟಿಗೆ ಈ ಖಂಡವು ಅನ್ವಯಿಸತಕ್ಕದ್ದಲ್ಲ.

**15. ಸದಸ್ಯ ಎಂಬುದರ ಪರಿಭಾಷೆ.–** ಈ ಅಧಿನಿಯಮದ ಉದ್ದೇಶಗಳಿಗಾಗಿ ಸೊಸೈಟಿಯ ಸದಸ್ಯನು ಸೊಸೈಟಿಗೆ ಅದರ ನಿಯಮಗಳು ಮತ್ತು ವಿನಿಯಮನಗಳಿಗೆ ಅನುಸಾರವಾಗಿ ಸೇರಿಸಿಕೊಳ್ಳಲಾಗಿದ್ದು, ಚಂದಾ ಸಂದಾಯ ಮಾಡಿರತಕ್ಕ ಅಥವಾ ಅದರ ಸದಸ್ಯರ ಹೆಸರು ಪಟ್ಟಿಗೆ ಅಥವಾ ಪಟ್ಟಿಗೆ ಸಹಿ ಹಾಕಿರತಕ್ಕ ಮತ್ತು ಅಂಥ ನಿಯಮಗಳು ಮತ್ತು ವಿನಿಯಮನಗಳಿಗೆ ಅನುಸಾರವಾಗಿ ರಾಜೀನಾಮೆ ನೀಡಿರದ ವ್ಯಕ್ತಿಯಾಗಿರತಕ್ಕದ್ದು.

**ಅನರ್ಹ ಸದಸ್ಯರು.–** ಆದರೆ ಈ ಅಧಿನಿಯಮದ ಮೇರೆಗಿನ ಎಲ್ಲ ವ್ಯವಹರಣೆಗಳಲ್ಲಿ ಯಾರ ಚಂದಾ ಮೂರು ತಿಂಗಳ ಅವಧಿಗೆ ಮೀರಿ ಬಾಕಿ ಉಳಿದಿದೆಯೋ ಆ ಯಾರೇ ವ್ಯಕ್ತಿಯು ಮತ ಚಲಾಯಿಸಲು ಅಥವಾ ಸದಸ್ಯನೆಂದು ಪರಿಗಣಿತನಾಗಲು ಹಕ್ಕುಳ್ಳವನಾಗತಕ್ಕದ್ದಲ್ಲ.

**16. ಆಡಳಿತ ನಿಕಾಯದ ಪರಿಭಾಷೆ.–** ಸೊಸೈಟಿಯ ನಿಯಮಗಳು ಮತ್ತು ವಿನಿಯಮನಗಳಿಂದ ಅದರ ವ್ಯವಹಾರಗಳ ಆಡಳಿತವನ್ನು ಯಾರಿಗೆ ವಹಿಸಲಾಗಿದೆಯೋ ಆ ಆಡಳಿತ ನಿರ್ವಾಹಕರು, ಪರಿಷತ್ತು, ನಿರ್ದೇಶಕರು, ಸಮಿತಿ, ನ್ಯಾಸಧಾರಿಗಳು ಅಥವಾ ಇತರ ನಿಕಾಯವು ಸಂಘದ ಆಡಳಿತ ನಿಕಾಯವಾಗಿರತಕ್ಕದ್ದು.

**17. ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ರಚಿಸಲಾದ ಸೊಸೈಟಿಗಳ ನೋಂದಣಿ.–** ಸಾಹಿತ್ಯಕ, ವೈಜ್ಞಾನಿಕ ಅಥವಾ ಧರ್ಮಾರ್ಥ ಉದ್ದೇಶಕ್ಕಾಗಿ ಸ್ಥಾಪಿಸಲಾದ ಮತ್ತು 1850ರ 43ನೇ ಅಧಿನಿಯಮದ ಮೇರೆಗೆ ನೋಂದಾಯಿತವಾದ ಯಾವುದೇ ಕಂಪನಿ ಅಥವಾ ಸೊಸೈಟಿ ಅಥವಾ ಈ ಅಧಿನಿಯಮವನ್ನು ಅಂಗೀಕರಿಸಿರುವುದಕ್ಕಿಂತ ಮುಂಚೆ ಸ್ಥಾಪಿಸಲಾದ ಮತ್ತು ರಚಿಸಲಾದ ಆದರೆ ಸದರಿ 1850ರ 43ನೇ ಅಧಿನಿಯಮದ ಮೇರೆಗೆ ನೋಂದಾಯಿತವಾಗದೆ ಇರುವಂಥ ಯಾವುದೇ ಸೊಸೈಟಿಯು ಇನ್ನು ಮುಂದೆ ಯಾವುದೇ ಸಮಯದಲ್ಲಿ ಈ ಅಧಿನಿಯಮದ ಮೇರೆಗೆ ನೋಂದಾಯಿತವಾಗಬಹುದು. ಇದು, ಈ ಪರಂತುಕಕ್ಕೊಳಪಟ್ಟಿದೆ; ಅಂಥ ಯಾವುದೇ ಕಂಪನಿ ಅಥವಾ ಸೊಸೈಟಿ, ಅದು ಹಾಗೆ ನೋಂದಾಯಿತವಾಗಬೇಕೆಂದು ಅದರ ಆಡಳಿತ ನಿಕಾಯವು ಆ ಉದ್ದೇಶಕ್ಕಾಗಿ ಕರೆದ ಯಾವುದೇ ಸಾಮಾನ್ಯ ಸಭೆಯಲ್ಲಿ ಖುದ್ದಾಗಿ ಅಥವಾ ಪ್ರತಿನಿಧಿ ಪತ್ರದ ಮೂಲಕ ಹಾಜರಿದ್ದ ಐದನೇ ಮೂರು ಭಾಗದ ಸದಸ್ಯರು ಅನುಮತಿ ನೀಡಿದ ಹೊರತು ಈ ಅಧಿನಿಯಮದ ಮೇರೆಗೆ ನೋಂದಾಯಿತವಾಗತಕ್ಕದ್ದಲ್ಲ.

1850ರ 43ನೇ ಅಧಿನಿಯಮದ ಮೇರೆಗೆ ನೋಂದಾಯಿತವಾದ ಕಂಪನಿ ಅಥವಾ ಸೊಸೈಟಿಯ ಸಂದರ್ಭದಲ್ಲಿ ನಿರ್ದೇಶಕರನ್ನು ಅಂಥ ಆಡಳಿತ ನಿಕಾಯ ಎಂದು ಭಾವಿಸತಕ್ಕದ್ದು.

ಹಾಗೆ ನೋಂದಣಿಯಾಗಿರದ ಸೊಸೈಟಿಯ ಸಂದರ್ಭದಲ್ಲಿ, ಅಂಥ ಯಾವುದೇ ನಿಕಾಯವು ಸೊಸೈಟಿಯ ಸ್ಥಾಪನೆಯ ತರುವಾಯ ರಚಿತವಾಗಿರದಿದ್ದರೆ, ಸೂಕ್ತ ನೋಟೀಸು ಕೊಟ್ಟು, ಅಂದಿನಿಂದ ಸೊಸೈಟಿಗೋಸ್ಕರ ಕಾರ್ಯನಡೆಸಲು ತನ್ನದೆ ಆದ ಒಂದು ಆಡಳಿತ ನಿಕಾಯವನ್ನು ರಚಿಸುವುದು ಅದರ ಸದಸ್ಯರಿಗೆ ಸಕ್ಷಮವಾಗಿರತಕ್ಕದ್ದು.

**18. ಅಂಥ ಸೊಸೈಟಿಗಳು ಜಾಯಿಂಟ್ ಸ್ಟಾಕ್ ಕಂಪನಿಗಳ ರಿಜಿಸ್ಟ್ರಾರನ ಬಳಿ ವಿವರಣಪತ್ರ, ಇತ್ಯಾದಿಗಳನ್ನು ದಾಖಲು ಮಾಡುವುದು.–** ಈ ಹಿಂದಿನ ಕೊನೆಯ ಪ್ರಕರಣದಲ್ಲಿ ಹೇಳಿದ ಅಂಥ ಯಾವುದೇ ಸೊಸೈಟಿ ಈ ಅಧಿನಿಯಮದ ಮೇರೆಗೆ ನೋಂದಣಿಯನ್ನು ಪಡೆಯಲು, ಆಡಳಿತ ನಿಕಾಯವು

ಸೊಸೈಟಿಯ ಹೆಸರು, ಸೊಸೈಟಿಯ ಉದ್ದೇಶಗಳು ಮತ್ತು ಆಡಳಿತ ನಿಕಾಯದಲ್ಲಿರುವವರ ಹೆಸರುಗಳು, ವಿಳಾಸಗಳು ಮತ್ತು ಉದ್ದೇಶಗಳನ್ನು ತಿಳಿಸುವ ಒಂದು ವಿವರಣಪತ್ರವನ್ನು 2ನೇ ಪ್ರಕರಣದಲ್ಲಿ ಉಪಬಂಧಿಸಲಾದಂತೆ ಪ್ರಮಾಣೀಕೃತವಾದ ಸೊಸೈಟಿಯ ನಿಯಮಗಳ ಹಾಗೂ ವಿನಿಯಮನಗಳ ಒಂದು ಪ್ರತಿಯೊಂದಿಗೆ ಮತ್ತು ನೋಂದಾಯಿಸುವ ನಿರ್ಣಯವನ್ನು ಮಾಡಿದ ಸಾಮಾನ್ಯ ಸಭೆಯ ವ್ಯವಹರಣೆಗಳ ವರದಿಯ ಒಂದು ಪ್ರತಿ ಸಹಿತವಾಗಿ, ಜಾಯಿಂಟ್ ಸ್ಟಾಕು ಕಂಪನಿಗಳ ರಿಜಿಸ್ಟ್ರಾರನ ಬಳಿ ದಾಖಲು ಮಾಡಿದರೆ ಸಾಕು.

**19. ದಸ್ತಾವೇಜುಗಳ ಪರಿಶೀಲನೆ, ಪ್ರಮಾಣೀಕೃತ ಪ್ರತಿಗಳು.–** ಯಾರೇ ವ್ಯಕ್ತಿಯು ರಿಜಿಸ್ಟ್ರಾರನ ಬಳಿ ಈ ಅಧಿನಿಯಮದ ಮೇರೆಗೆ ದಾಖಲು ಮಾಡಲಾದ ಎಲ್ಲಾ ದಸ್ತಾವೇಜುಗಳನ್ನು, ಪ್ರತಿಯೊಂದು ಪರಿಶೀಲನೆಗೂ ಒಂದು ರೂಪಾಯಿ ಫೀಜನ್ನು ಸಂದಾಯ ಮಾಡಿ ಪರಿಶೀಲಿಸಬಹುದು ಮತ್ತು ಯಾವುದೇ ದಸ್ತಾವೇಜಿನ ಅಥವಾ ಉದ್ಧೃತಿಯ ಅಥವಾ ಯಾವುದೇ ದಸ್ತಾವೇಜಿನ ಯಾವುದೇ ಭಾಗದ ಪ್ರತಿಯನ್ನು ಅಂಥ ಪ್ರತಿಯ ಅಥವಾ ಉದ್ಧೃತಿಯ ಪ್ರತಿ ನೂರು ಪದಗಳಿಗೆ ಎರಡು ಆಣೆಯನ್ನು ಸಂದಾಯ ಮಾಡಿ ರಿಜಿಸ್ಟ್ರಾರನು ಪ್ರಮಾಣೀಕರಿಸಬೇಕೆಂದು ಯಾರೇ ವ್ಯಕ್ತಿಯು ಕೋರಬಹುದು ಮತ್ತು ಅಂಥ ಪ್ರಮಾಣೀಕೃತ ಪ್ರತಿ ಅದರಲ್ಲಿ ಒಳಗೊಂಡ ವಿಷಯಗಳ ಬಗ್ಗೆ ಎಲ್ಲ ರೀತಿಯ ಕಾನೂನು ವ್ಯವಹರಣೆಗಳಲ್ಲೂ ಮೊದಲ ನೋಟದ ಸಾಕ್ಷ್ಯವಾಗಿರತಕ್ಕದ್ದು.

**20. ಯಾವ ಸೊಸೈಟಿಗಳಿಗೆ ಈ ಅಧಿನಿಯಮವು ಅನ್ವಯಿಸುತ್ತದೆ.–** ಕೆಳಕಂಡ ಸೊಸೈಟಿಗಳನ್ನು ಈ ಅಧಿನಿಯಮಗಳ ಮೇರೆಗೆ ನೋಂದಾಯಿಸಬಹುದು,–

ಧರ್ಮಾರ್ಥ ಸೊಸೈಟಿಗಳು, ಭಾರತದ ವಿವಿಧ ಪ್ರೆಸಿಡೆನ್ಸಿಗಳಲ್ಲಿ ಸ್ಥಾಪಿತವಾದ ಸೈನಿಕ ಅನಾಥ ನಿಧಿಗಳು ಅಥವಾ ಸೊಸೈಟಿಗಳು, ವಿಜ್ಞಾನ, ಸಾಹಿತ್ಯ ಅಥವಾ ಲಲಿತ ಕಲೆಗಳ ಸಂವರ್ಧನೆಗಾಗಿ, ಬೋಧನೆಗಾಗಿ, ಉಪಯುಕ್ತ ಜ್ಞಾನ ಪ್ರಸರಣಕ್ಕಾಗಿ, ರಾಜಕೀಯ ಶಿಕ್ಷಣದ ಪ್ರಸರಣಕ್ಕಾಗಿ ಸದಸ್ಯರ ಅಥವಾ ಸಾರ್ವಜನಿಕರ ಸಾಮಾನ್ಯ ಬಳಕೆಗಾಗಿ, ಗ್ರಂಥಾಲಯಗಳು ಅಥವಾ ವಾಚನಾಲಯಗಳ ಸಂಸ್ಥಾಪನೆ ಅಥವಾ ನಿರ್ವಹಣೆಯ ಸಲುವಾಗಿ ಅಥವಾ ಚಿತ್ರಕಲೆಗಳು ಮತ್ತು ಇತರ ಕಲಾವಸ್ತುಗಳ ಪ್ರಾಕೃತಿಕ ಚರಿತ್ರೆ; ಯಾಂತ್ರಿಕ ಮತ್ತು ತಾತ್ವಿಕ ಆವಿಷ್ಕಾರಗಳ, ಉಪಕರಣಗಳ ಅಥವಾ ವಿನ್ಯಾಸಗಳ ಸಾರ್ವಜನಿಕ ಸಂಗ್ರಹಾಲಯಗಳಿಗಾಗಿ ಮತ್ತು ಗ್ಯಾಲರಿಗಳ ಪ್ರತಿಷ್ಠಾಪನೆ ಅಥವಾ ನಿರ್ವಹಣೆಗಾಗಿ ಸ್ಥಾಪಿಸಲಾದ ಸೊಸೈಟಿಗಳು.

******